101

15/ನೀ ಅ

**ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಕೋಟ ಶ್ರೀನಿವಾಸ ಪೂಜಾರಿ ಇವರು ನಿಯಮ -72ರಡಿ ಮಂಡಿಸಿರುವ ಸೂಚನೆಗೆ ಸರ್ಕಾರದ ಹೇಳಿಕೆ.**

**ಸೂಚನೆ:-**

ಬೆಂಗಳೂರು ನಗರ ಜಿಲ್ಲೆ, ಆನೇಕಲ್ ತಾಲ್ಲೂಕು ನಗರ ವ್ಯಾಪ್ತಿಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದ ಸುಮಾರು 300 ಹೆಚ್ಚು ಕುಟುಂಬಗಳಿಗೆ ಅನಧಿಕೃತ ಸಾಗುವಳಿ ಸಕ್ರಮ ಯೋಜನೆಯಡಿ (ನಮೂನೆ-50,53,57 ರಡಿ) ಅನುಮೋದನೆಗೊಂಡು ಸಾಗುವಳಿ ಚೀಟಿ-ಹಕ್ಕುಪತ್ರ ವಿತರಿಸಲು ಬಾಕಿ ಇರುವ ಪ್ರಕರಣಗಳ ಕುರಿತು ಮಾನ್ಯ ಕಂದಾಯ ಸಚಿವರ ಗಮನವನ್ನು ಸೆಳೆಯುತ್ತೇನೆ.

**ಹೇಳಿಕೆ:-**

ಬೆಂಗಳೂರು ನಗರ ಜಿಲ್ಲೆ, ಆನೇಕಲ್ ತಾಲ್ಲೂಕು ವ್ಯಾಪ್ತಿಯಲ್ಲಿ ನಮೂನೆ-50, 53ರಡಿ ಸ್ವೀಕೃತವಾಗಿರುವ ಅರ್ಜಿಗಳಲ್ಲಿ ಆನೇಕಲ್ ತಾಲ್ಲೂಕು ಬಗರ್ ಹುಕ್ಕುಂ ಸಾಗುವಳಿ ಸಮಿತಿಯಲ್ಲಿ ದಿನಾಂಕ: 03.04.1993, 21.07.2001, 03.01.2003, 09.01.2003, 04.09.2003, 03.02.2004, 03.04.2004, 28.08.2012 ಮತ್ತು 10.07.2012 ರಲ್ಲಿ ಆಗಿರುವ ತೀರ್ಮಾನದಂತೆ ಅನುಮೋದಿಸಿ/ ತಿರಸ್ಕರಿಸಿರುವ ಪ್ರಕರಣಗಳ ವಿವರ ಈ ಕೆಳಗಿನಂತೆ ಇರುತ್ತದೆ. ನಮೂನೆ-57ರಲ್ಲಿ ಯಾವುದೇ ಸಕ್ರಮೀಕರಣ ಆಗಿರುವುದಿಲ್ಲ.

| ಕ್ರ. ಸಂ | ಅನಧಿಕೃತ ಸಾಗುವಳಿ ಸಕ್ರಮ ಸಮಿತಿ ಸಭೆಯ ದಿನಾಂಕ | ಅನುಮೋದನೆಗೊಂಡ ಪ್ರಕರಣಗಳ ಸಂಖ್ಯೆ | | ತಿರಸ್ಕೃತಗೊಂಡ ಪ್ರಕರಣಗಳ ಸಂಖ್ಯೆ | | ಸಮಿತಿಯಲ್ಲಿ ಮಂಡಿಸಿ. ಯಾವುದೇ ಕ್ರಮವಹಿಸದೆ ಇರುವ ಪ್ರಕರಣಗಳು | ತಿರಸ್ಕರಿಸಲು ಕಾರಣ |
|---|---|---|---|---|---|---|---|
| | | ನಮೂನೆ-50 | ನಮೂನೆ-53 | ನಮೂನೆ-50 | ನಮೂನೆ-53 | | |
| 1 | 03.04.1993 | 102 | - | 36 | - | 41 | ಸಾಗುವಳಿ ಇರುವುದಿಲ್ಲ. ಹಿಡುವಳಿ ಜಮೀನು 18 ಕಿ.ಮೀ. ವ್ಯಾಪ್ತಿಗೆ ಒಳಪಡುವುದರಿಂದ ಪುರಸಭೆ ವ್ಯಾಪ್ತಿಯಿಂದ 5 ಕಿ.ಮೀ ರಾಷ್ಟ್ರೀಯ ಉದ್ಯಾನವನ ವ್ಯಾಪ್ತಿಗೆ ಒಳಪಡುವುದರಿಂದ |
| 2 | 21.07.2001 | ವಹಿ ಇರುವುದಿಲ್ಲ | | | | | |
| 3 | 03.01.2003 | ಸದರಿ ದಿನಾಂಕದಂದು ಸಮಿತಿ ಸಭೆ ನಡೆದಿರುವುದಿಲ್ಲ | | | | | |
| 4 | 09.01.2003 | - | 13 | - | 687 | 41 | |
| 5 | 04.09.2003 | 6 | 16 | - | 44 | 3 | |
| 6 | 03.02.2004 | 1 | 118 | - | 202 | - | |
| 7 | 03.04.2004 | ಸದರಿ ದಿನಾಂಕದಂದು ಸಮಿತಿ ಸಭೆ ನಡೆದಿರುವುದಿಲ್ಲ | | | | | |
| 8 | 10.07.2012 | ಸದರಿ ದಿನಾಂಕದಂದು ಸಮಿತಿ ಸಭೆ ನಡೆದಿರುವುದಿಲ್ಲ | | | | | |
| 9 | 28.08.2012 | 2 | - | - | 368 | 295 | |
| **ಒಟ್ಟು** | | **111** | **147** | **36** | **1301** | **380** | |

ಮೇಲ್ಕಂಡ ಒಟ್ಟು 1975 ಪ್ರಕರಣಗಳ ಪೈಕಿ ಹಲವು ಪ್ರಕರಣಗಳಲ್ಲಿ ಈ ಕೆಳಗಿನಂತೆ ಕ್ರಮ ವಹಿಸಲಾಗಿದ್ದು, ಬಾಕಿ ಉಳಿದಿರುವ ಪ್ರಕರಣಗಳಾಗಿರುತ್ತದೆ.

1. 87 ಪ್ರಕರಣಗಳಲ್ಲಿ ಅಧಿಕೃತ ಜ್ಞಾಪನ ಆಗಿದ್ದು, ಹಣ ಪಾವತಿಸಿದ್ದು, ಸಾಗುವಳಿ ಚೀಟಿಯನ್ನು ವಿತರಿಸಲು ಬಾಕಿ ಇರುತ್ತದೆ.
2. 64 ಪ್ರಕರಣಗಳಲ್ಲಿ ಅಧಿಕೃತ ಜ್ಞಾಪನ ಆಗಿದ್ದು, ಚಲನ್ ಪಾವತಿಸದೆ ಸಾಗುವಳಿ ಚೀಟಿಯನ್ನು ವಿತರಿಸಲು ಬಾಕಿ ಇರುತ್ತದೆ.
3. 35 ಪ್ರಕರಣಗಳಲ್ಲಿ ಅಧಿಕೃತ ಜ್ಞಾಪನ ಆಗಿದ್ದು, ಹಣ ಪಾವತಿಸಲು ನೋಟಿಸ್ ನೀಡಲಾಗಿದ್ದು, ಹಣ ಪಾವತಿಸಿರುವುದಿಲ್ಲ.

4. 78 ಪ್ರಕರಣಗಳಲ್ಲಿ ಸಮಿತಿಯಿಂದ ಅನುಮೋದನೆಗೊಂಡು ಹಣ ಪಾವತಿಸಲು ನೋಟಿಸ್ ನೀಡಲು ಬಾಕಿ ಇರುತ್ತದೆ.
5. 14 ಪ್ರಕರಣಗಳಲ್ಲಿ ಅಧಿಕೃತ ಜ್ಞಾಪನ ಆಗಿದ್ದು, ಹಣ ಪಾವತಿಸಿದ್ದು, ಸಾಗುವಳಿ ಚೀಟಿಯನ್ನು ವಿತರಿಸಿದ್ದು, ಸಾಗುವಳಿ ಚೀಟಿಯ ವಿತರಣಾ ವಹಿಯಲ್ಲಿ ಸಹಿಯಾಗದೆ ಬಾಕಿ ಇರುತ್ತದೆ.
6. 289 ಪ್ರಕರಣಗಳಲ್ಲಿ ಸಮಿತಿಯಿಂದ ಅನುಮೋದನೆಗೊಂಡಿದ್ದು, ಅಧಿಕೃತ ಜ್ಞಾಪನ ಹೊರಡಿಸಲು ಬಾಕಿ ಇರುತ್ತದೆ.
7. 18 ಪ್ರಕರಣಗಳಲ್ಲಿ ದರಖಾಸ್ತು ನಮೂನೆ-1ರಲ್ಲಿ ಮಂಜೂರಾಗಿ ಸಾಗುವಳಿ ಚೀಟಿ ನೀಡಲು ಬಾಕಿ ಇರುತ್ತದೆ.
8. 109 ಪ್ರಕರಣಗಳಲ್ಲಿ ನ್ಯಾಯಾಲಯದ ಆದೇಶದಂತೆ ಸಾಗುವಳಿ ಚೀಟಿ ನೀಡಲು ಬಾಕಿ ಇರುತ್ತದೆ.
9. ಈ ಪೈಕಿ ಒಟ್ಟು 306 ಪ್ರಕರಣಗಳಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರು ಇರುತ್ತಾರೆ.

ಆನೇಕಲ್ ತಾಲ್ಲೂಕು ವ್ಯಾಪ್ತಿಯಲ್ಲಿ ಸಾಗುವಳಿ ಚೀಟಿ ವಿತರಣೆ ಮಾಡಲು ಬಾಕಿಯಿರುವ ಅರ್ಜಿಗಳಿಗೆ ಸಂಬಂಧಿಸಿದಂತೆ, ಮಾನ್ಯ ಉಚ್ಚ ನ್ಯಾಯಲಯದಲ್ಲಿ ಪ್ರಕರಣ ದಾಖಲಾಗಿದ್ದು, ರಿಟ್ ಅರ್ಜಿ ಸಂ:15077/2020ರಲ್ಲಿ ಮಾನ್ಯ ನ್ಯಾಯಾಲಯದ ದಿನಾಂಕ:20-08-2021ರ ಸಾರಾಂಶ ಈ ಕೆಳಗಿನಂತಿದೆ.

"The contention that the Tahasildar has to act upon the opinion rendered by the Law Department of the govt and therefore, no relief can be granted to the petitioners, does not merit acceptance.

(e) There is yet another aspect which the Tahasildar appears to have lost sight of the applications have to be adjudged on the basis of the position that obtained when they were made is supported by Mahadev case supra and the case in Ramanaik vs. Deputy Commissioner, ILR 2007 KAR 1521 rendered by another co-ordinate bench. Had this been kept in view, the cases of same of the petitioners if not all, gets stranger and the version of the Tahasildar is rendered weak."

ಮುಂದುವರೆದು ಇದೇ ಪ್ರಕರಣದಲ್ಲಿ ದಿನಾಂಕ:16-08-2021 ರಂದು ಈ ಕೆಳಗಿನಂತೆ ಆದೇಶಿಸಿರುತ್ತದೆ.

"Tahasildar is bound by the resolution of the committee for regularization of unauthorized occupation; however it is open to seek cancellation of the said grant or regularization in terms of rule 108-k at the hands of the Asst. Commissioner should there exist the grounds therefor".

ಮಾನ್ಯ ಉಚ್ಚ ನ್ಯಾಯಲಯದ ರಿಟ್ ಅರ್ಜಿ ಸಂ:15077/2020ರಲ್ಲಿ ದಿನಾಂಕ:16.08.2021ರ ಆದೇಶದಂತೆ ಕರ್ನಾಟಕ ಭೂ ಮಂಜೂರಾತಿ ನಿಯಮಗಳು 1966ರ ನಿಯಮ 108 ಕೆ ರಡಿಯಲ್ಲಿ ರದ್ದುಪಡಿಸಲು ಕೋರಿ ಆನೇಕಲ್ ತಾಲ್ಲೂಕು ತಹಶೀಲ್ದಾರ್ ರವರು ದಿನಾಂಕ:15.02.2022ರಂದು ಉಪವಿಭಾಗಾಧಿಕಾರಿಗಳು, ಬೆಂಗಳೂರು ದಕ್ಷಿಣ ಉಪವಿಭಾಗ ರವರಿಗೆ ಸಲ್ಲಿಸಲಾಗಿದ್ದು, ಈ ಪ್ರಕರಣದಲ್ಲಿ ಪ್ರಸ್ತುತ ಉಪವಿಭಾಗಾಧಿಕಾರಿಗಳ ನ್ಯಾಯಾಲಯದಲ್ಲಿ ಮೇಲ್ಕಂಡ ಸಮಿತಿಯ ನಿರ್ಣಯಗಳಿಗೆ ದಿನಾಂಕ:23.03.2022ರಲ್ಲಿ ತಡೆಯಾಜ್ಞೆ ನೀಡಿದ್ದು, ಪ್ರಕರಣವು ಉಪವಿಭಾಗಾಧಿಕಾರಿಯವರ ನ್ಯಾಯಾಲಯದಲ್ಲಿ ಇತ್ಯರ್ಥವಾಗಲು ಬಾಕಿ ಇರುತ್ತದೆ.

**ಆರ್‌ಡಿ 132 ಎಲ್‌ಜಿಕ್ಯೂ 2023**

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು